## ಟ್ರೆಂಡ್‌ನಲ್ಲಿರುವ ಟ್ರೈಬಲ್ ಪ್ರಿಂಟ್‌ಗಳು

- ವರ್ಲಿ
- ಕಲಂಕಾರಿ
- ಮಧುಬನಿ
- ಆಫ್ರಿಕನ್
- ಅಂಕಾರ
- ಇಕತ್
- ಕೆಂಟೆ
- ಗ್ಯಾನಡೊ
- ಚಿನ್ಲೆ

ಜೀವವೈವಿಧ್ಯವನ್ನು ಪ್ರತಿಬಿಂಬಿಸುತ್ತದೆ ಈ ಕಸೂತಿ. ಭಾಗ್ ಪ್ರಿಂಟ್ ಮಾದರಿಯ ಸೀರೆಗಳು, ಕಾಟನ್ ಸಲ್ವಾರ್‌ಗಳು ಮತ್ತು ದುಪಟ್ಟಾ, ಕುರ್ತಿಗಳು, ಉದ್ದ ಸ್ಕರ್ಟ್‌ಗಳು, ಪ್ಯಾಂಟ್‌ಗಳು ಈ ಮಾದರಿಯಲ್ಲಿ ಸಿಗುತ್ತವೆ.

ಬುಡಕಟ್ಟು ಕಲೆ ಮತ್ತು ಸಂಸ್ಕೃತಿಯು ಸ್ಥಳೀಯವಾಗಿ ಅಷ್ಟೆ ಅಲ್ಲ; ಜಾಗತಿಕ ಮಟ್ಟದಲ್ಲಿಯೂ ವಿನ್ಯಾಸಗಾರರು ಮತ್ತು ಕಲಾವಿದರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದ್ದರಿಂದ ಇಂಥದ್ದೊಂದು ಟ್ರೆಂಡ್ ಸೃಷ್ಟಿಯಾಗಿದೆ. ನೆರಳುಗೆರೆಯ ಚಿತ್ರಗಳು ತುಂಡು ಬಟ್ಟೆಗಳ ಮೇಲೆ, ಈಜುಡುಗೆ, ಕಫ್ತಾನಾ, ಮ್ಯಾಕ್ಸಿಸ್ ಮೇಲೆಯೂ ನೋಡಬಹುದು. ಬಹಳ ಸೂಕ್ಷ್ಮವಾಗಿ ವಿನ್ಯಾಸಗೊಂಡ ಬುಡಕಟ್ಟು ಕಲೆಯ ಚಿತ್ರಗಳಿರುವ ಸಾದಾ ಬಟ್ಟೆಗಳು ಎಲ್ಲ ಸಂದರ್ಭಗಳಿಗೂ ಹೊಂದುತ್ತವೆ.

### ಆಭರಣಗಳು

ಈ ಆಭರಣಗಳು ಹೊಸ ಬಗೆಯ ಕ್ರೇಜ್ ಅನ್ನೇ ಹುಟ್ಟುಹಾಕಿವೆ. ವಿನ್ಯಾಸಕಾರರಿಗೆ ಸೃಜನಶೀಲತೆಯನ್ನು ತೋರ್ಪಡಿಸಲು ಈ ಟ್ರೈಬಲ್ ಆಭರಣಗಳು ಬಹಳ ನೆರವಾಗಿವೆ. ಕೇವಲ ಭಾರತದಲ್ಲಿ ಅಷ್ಟೇ ಅಲ್ಲದೆ ವಿಶ್ವದ ನಾನಾ ಭಾಗಗಳ ಫ್ಯಾಷನ್ ಕೇಂದ್ರಗಳಲ್ಲಿ ಇದು ಹೆಚ್ಚು ಚಾಲ್ತಿಯಲ್ಲಿರುವ ವಿನ್ಯಾಸ. ಗಾಢ ಬಣ್ಣ ಹಾಗೂ ಚಿತ್ರಗಳಿಂದಾಗಿ ಎದುರಿಗಿರುವವರ ಮನಸ್ಸನ್ನು ಕದಿಯುತ್ತದೆ.

ಯುದ್ಧದಲ್ಲಿ ಹಿಡಿದ ಶಸ್ತ್ರ ಗುರಾಣಿಗಳಂತೆ ಕಾಣುವ ಲೋಹದ ದೊಡ್ಡ ಅಳತೆಯ ಬಳೆಗಳು, ಪುಟ್ಟ ಪುಟ್ಟ ಗೆಜ್ಜೆ ಜೋಡಿಸಿಟ್ಟ ಹಾಗೆ ಕಾಣುವ ಸಪೂರ ಬಳೆಗಳು, ಒತ್ತು ಒತ್ತಾಗಿ ನಿಲ್ಲುವ ತೋಳಬಂದಿಯಂತೆ ಕಾಣುವ ಕೈ ಬಳೆಗಳು, ಚೂಪು ಚೂಪು ಚಿಹ್ನೆಯ ಕತ್ತಿನ ಹಾರಗಳು, ಅಗಲವಾದ ಮಣಿ ಹಾರಗಳು, ಬಣ್ಣದ ಬಣ್ಣದ ಕಲ್ಲು ಬಳಸಿ ಮಾಡಿದ ಹಾರಗಳು, ದೊಡ್ಡ ನತ್ತು, ದೊಡ್ಡ ಕಿವಿಯೋಲೆಗಳು ಮಾರುಕಟ್ಟೆಯಲ್ಲಿ ಪ್ರಸಿದ್ಧಿಯಾಗಿವೆ.

ಈಗೀಗ ಹೆಚ್ಚು ಟ್ರೆಂಡ್ ಆಗಿರುವ ಬಾಡಿ ಪಿಯರ್ಸ್ ಬುಡಕಟ್ಟು ಸಂಸ್ಕೃತಿಯ ಭಾಗ. ಭಾರವಾದ ಕಪ್ಪು ಲೋಹಗಳಿಂದ ಮಾಡಿದ ಪುಟ್ಟ ಆಭರಣಗಳನ್ನು ಮೂಗಿನ ಕೆಳಗೆ, ಭ್ರೂಮಧ್ಯ, ಗದ್ದದ ಭಾಗ, ಹೊಕ್ಕುಳಿನಲ್ಲಿ ಚುಚ್ಚಿಸಿಕೊಳ್ಳಾಗುತ್ತದೆ. ಇನ್ನುಈ ಆಭರಣಗಳು ಸಾಂಪ್ರದಾಯಿಕ ಅಥವಾ ಪಾಶ್ಚಿಮಾತ್ಯ ಉಡುಗೆಗೂ ಸೂಕ್ತವಾಗಿ ಹೊಂದಿಕೆಯಾಗುವುದು ವಿಶೇಷ.

### ಫ್ಯೂಷನ್ ಈಗೀಗ ಫ್ಯಾಷನ್

ಟ್ರೈಬಲ್ ದಿರಿಸಿನಲ್ಲಿಯೂ ಫ್ಯೂಷನ್ ಎಂಬುದು ಹೆಚ್ಚು ಚಾಲ್ತಿಯಲ್ಲಿದೆ. ಗಾಢ ಬಣ್ಣದ, ದೊಡ್ಡ ದೊಡ್ಡ ಚಿತ್ರಗಳು ಟ್ರೈಬಲ್ ಟ್ರೆಂಡ್‌ನಲ್ಲಿ ಸಾಮಾನ್ಯ. ಇದನ್ನೆ ತಿಳಿ ಬಣ್ಣದ ಬಟ್ಟೆಯ ಮೇಲೆ ಹಾಕಿದರೆ ಅದರ ಅಂದ ಇನ್ನಷ್ಟು ಹೆಚ್ಚುತ್ತದೆ.

ಕಲಾಂಕರಿ ಶೈಲಿಯ ಸೀರೆಗಳು, ಕುರ್ತಾಗಳಿಗೆ ಭಾರಿ ಬೇಡಿಕೆ ಇದೆ. ಇನ್ನು ರೇಷ್ಮೆ ಸೀರೆ, ಉದ್ದ ನಿಲುವಂಗಿಗಳ ಅಂಚು, ರವಿಕೆಯ ಕೈಯ ಅಂಚಿನ ವಿನ್ಯಾಸ ಕಲಂಕಾರಿ, ವರ್ಲಿಯದ್ದು ಆಗಿರುವುದು ಇನ್ನು ವಿಶೇಷ. ಹಳೆಯ ಕಾಲದ ಕಾಂಜೀವರಂ ಸೀರೆಗೂ, ಅಜ್ಜಿ ಕಾಲದ ರೇಷ್ಮೆ ಸೀರೆಗೂ ಸಂಪೂರ್ಣ ಕಲಂಕಾರಿ ಅಥವಾ ವರ್ಲಿ ಚಿತ್ತಾರ ಇರುವ ರವಿಕೆಯು ಚಂದದ ಲುಕ್ ನೀಡುವುದರಲ್ಲಿ ಎರಡು ಮಾತಿಲ್ಲ.

ಚಿನ್ನಾಭರಣ ತಯಾರಿಕೆಯಲ್ಲಿ ಇದೇ ಟ್ರೆಂಡ್ ಅನ್ನು ಅನುಸರಿಸಲಾಗುತ್ತಿದೆ. ಭಾರಿ ಗಾತ್ರದ ಟ್ರೈಬಲ್ ಆಭರಣಗಳನ್ನು ಸಾಂಪ್ರದಾಯಿಕ ಮಾದರಿಯಲ್ಲಿ ತಯಾರಿಸಿ ಗ್ರಾಹಕರ ಮುಂದಿಡಲಾಗುತ್ತಿದೆ. ಜತೆಗೆ ಬಣ್ಣದ ಬಣ್ಣದ ಕಲ್ಲುಗಳು, ಹರಳುಗಳು, ಮಣಿಗಳನ್ನು ಬಳಸಿ ಮಾಡಿದ ಕತ್ತಿನ ಹಾರಗಳಿಗೆ ಭಾರಿ ಬೇಡಿಕೆ ಇದೆ.

### ಏನು ಮಾಡಬಹುದು?

- ಇದರ ಬಣ್ಣ ಗಾಢವಾಗಿರುವುದರಿಂದ ಎಲ್ಲ ಕಾರ್ಯಕ್ರಮಗಳಿಗೆ ಹೊಂದಿಕೆಯಾಗುವುದು



ತುಸು ಕಷ್ಟ. ಸಂದರ್ಭಕ್ಕಾನುಸಾರವಾಗಿ ಇದನ್ನು ತೊಡಬಹುದು.

- ಎಲ್ಲ ಪ್ರಾಣಿಗಳು ಇರುವ ಚಿತ್ರಗಳಿದ್ದರೆ ಅದು ಒಡ್ಡೊಡ್ಡಾಗಿ ಕಾಣುವ ಸಾಧ್ಯತೆ ಹೆಚ್ಚು. ಚಿತ್ತಾರಗಳು ಗೊಂದಲ ಹುಟ್ಟಿಸುವಷ್ಟು ದೊಡ್ಡ ಪ್ರಮಾಣದಲ್ಲಿರುತ್ತದೆ. ಹಾಗಾಗಿ ಒಂದೇ ಪ್ರಾಣಿ ಚಿತ್ರ ಇರುವ ಮತ್ತು ಈ ಚಿತ್ರಗಳು ಬಟ್ಟೆಯ ಬಣ್ಣಕ್ಕೆ ಹೊಂದಿಕೆಯಾಗುವಂತಿದ್ದರೆ ಅಂಥದ್ದನ್ನು ಆಯ್ದುಕೊಳ್ಳಬಹುದು.
- ಸೀರೆ ಉಟ್ಟಾಗ ಭಾರವಾದ ಲೋಹ ಮಾದರಿಯ ಆಭರಣಗಳನ್ನು ತೊಡಬಹುದು. ನೇತಾಡುವ ಆಭರಣಗಳು ಕಿವಿಯಲ್ಲಿದ್ದರೆ, ಅಗಲವಾದ ಬಳೆಗಳನ್ನು ಕೈಗೆ ತೊಡಬಹುದು. ಆಗ ಕತ್ತನ್ನು ಯಾವುದೇ ಆಭರಣವಿಲ್ಲದೆ ಬಿಟ್ಟರೆ ಲುಕ್ ಹೆಚ್ಚುತ್ತದೆ.
- ಲೋಹದ ಆಭರಣವನ್ನು ಧರಿಸುವಾಗ ಆದಷ್ಟು ಕಾಟನ್ ಸೀರೆಗಳು, ಕುರ್ತಾಗಳನ್ನು ಧರಿಸುವುದು ಸೂಕ್ತ. ಮ್ಯಾಕ್ಸಿ, ಮಿನಿ ಹಾಗೂ ಉದ್ದದ ಸ್ಕರ್ಟ್‌ಗಳಿದ್ದಾಗ ಮಣಿ ಆಭರಣಗಳು ಹೊಂದಿಕೆಯಾಗುತ್ತವೆ.
- ಸಂಗೀತ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಈ ಬಟ್ಟೆ ಮತ್ತು ಆಭರಣವು ಹೆಚ್ಚು ಹೊಂದುತ್ತವೆ.



> ಸಾಂಪ್ರದಾಯಿಕ ಕಾರ್ಯಕ್ರಮವಿರಲಿ ಅಥವಾ ಸ್ನೇಹಿತರ ಜತೆಗಿನ ಕಾರ್ಯಕ್ರಮವೇ ಇರಲಿ ವರ್ಲಿ, ಕಲಂಕಾರಿ ಇರುವ ಸೀರೆ ಹಾಗೂ ಕುರ್ತಾಗಳು ಬಹಳ ಕಂಫರ್ಟ್ ಎನಿಸುತ್ತವೆ. ಮಧುಬನಿಯಲ್ಲಿ ಬಣ್ಣದ ಬಳಕೆ ಸ್ವಲ್ಪ ವೈಬ್ರಂಟ್ ಅನಿಸಿದರೂ ಎದ್ದು ಕಾಣುತ್ತದೆ. ಪುರಾಣ ಕಥೆಗಳ ಪಾತ್ರಗಳನ್ನು ಇಟ್ಟುಕೊಂಡು ಚಿತ್ತಾರಗಳನ್ನು ಮಾಡಿರುವುದರಿಂದ ಇದನ್ನು ತೊಟ್ಟರೆ ಮನಸ್ಸಿಗೆ ಮುದ ಸಿಗುತ್ತದೆ.
>
> **-ಪದ್ಮ ರಾಗ,** ಚಿತ್ರಕಲಾ ಶಿಕ್ಷಕಿ